ಮೇರೆಗೆ ಪ್ರಸ್ತಾವವನ್ನು ತಂದಿದ್ದಾರೆ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷಿಣಿಯವರು : ಮಾನ್ಯ ಸದಸ್ಯರು ಪ್ರಸ್ತಾವವನ್ನು ಮಂಡಿಸಬೇಕು.

ಶ್ರೀ ಹೆಚ್. ಏಕಾಂತಯ್ಯ : ಪ್ರಸ್ತಾವ ಏನೆಂದರೆ,

'ದೆಹಲಿ ವಿಶೇಷ ಪೊಲೀಸ್ ಸಿಬ್ಬಂದಿ ಕಾಯಿದೆಯ 6ನೇ ವಿಧಿಯ ಅನ್ವಯದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಭ್ರಷ್ಟಾಚಾರ ನಿರೋಧ ಕಾಯಿದೆ ವ್ಯಾಪ್ತಿಯಲ್ಲಿ ಬರುವ ಅಪರಾಧಗಳನ್ನು ತನಿಖೆ ಮಾಡಲು ಈ ಹಿಂದೆ ರಾಜ್ಯ ಸರ್ಕಾರವು ನೀಡಿದ್ದ ಸಮ್ಮತಿಯನ್ನು ತಾರೀಖು 27-7-91ರಂದು ಹಿಂತೆಗೆದುಕೊಂಡಿರುವುದನ್ನು ಈ ಸದನವು ಅಸಮ್ಮತಿಸುತ್ತದೆ. ಮತ್ತು ಸದರಿ ಅಪರಾಧಗಳಿಗೆ ಸಂಬಂಧಪಟ್ಟಂತೆ ತನಿಖೆ ಮಾಡಲು ಅವಶ್ಯವಾದ ಸಮ್ಮತಿ ನೀಡುವಂತೆ ರಾಜ್ಯ ಸರ್ಕಾರವನ್ನು ಈ ಸದನವು ಒತ್ತಾಯಿಸುತ್ತದೆ.

ಉಪಾಧ್ಯಕ್ಷಿಣಿಯವರು : ಪ್ರಸ್ತಾವವನ್ನು ಮಂಡಿಸಲಾಯಿತು. ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವನೆ ಹೀಗಿದೆ:

"ದೆಹಲಿ ವಿಶೇಷ ಪೊಲೀಸ್ ಸಿಬ್ಬಂದಿ ಕಾಯಿದೆಯ 6ನೇ ವಿಧಿಯ ಅನ್ವಯದತ್ತವಾಗಿರುವ ಅಧಿಕಾರವನ್ನು ಚಲಾಯಾಸಿ ಭ್ರಷ್ಟಾಚಾರ ನಿರೋಧ ಕಾಯಿದೆ ವ್ಯಾಪ್ತಿಯಲ್ಲಿ ಬರುವ ಅಪರಾಧಗಳನ್ನು ತನಿಖೆ ಮಾಡಲು ಈ ಹಿಂದೆ ರಾಜ್ಯಸರ್ಕಾರವು ನೀಡಿದ್ದ ಸಮ್ಮತಿಯನ್ನು ತಾರಿಖು 27-7-1991ರಂದು ಹಿಂತೆಗೆದುಕೊಂಡಿರುವುದನ್ನು ಈ ಸನದವು ಅಸಮ್ಮತ್ರಿಸುತ್ತದೆ. ಮತ್ತು ಸದರಿ ಅಪರಾಧಗಳಿಗೆ ಸಂಬಂಧಪಟ್ಟಂತೆ ತನಿಖೆ ಮಾಡಲು ಅವಶ್ಯವಾದ ಸಮ್ಮತಿ ನೀಡುವಂತೆ ರಾಜ್ಯ ಸರ್ಕಾರವನ್ನು ಈ ಸದನವು ಒತ್ತಾಯಿಸುತ್ತದೆ.

ಪ್ರಸ್ತಾವ ಬಿದ್ದುಹೋಯಿತು - ಪ್ರಸ್ತಾವವನ್ನು ತಿರಸ್ಕರಿಸಲಾಯಿತು.

ಉಪಾಧ್ಯಕ್ಷಿಣಿಯವರು : ಶ್ರೀ ರಂಗನಾಥ್ ಅವರ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಅಲ್ಪಕಾಲಾವಧಿ ಚರ್ಚೆಯನ್ನು ಕೊನೆಗೆ ತೆಗೆದುಕೊಳ್ಳೋಣ. ಮೊದಲು ಬಿಲ್‌ಗಳನ್ನು ತೆಗೆದುಕೊಳ್ಳೋಣ, ಏಕೆಂದರೆ ಅಪ್ಪರ್ ಹೌಸ್‌ನಲ್ಲಿ ಈ ಬಿಲ್ಲುಗಳು ಪಾಸ್ ಆಗಬೇಕಾಗಿದೆ. ಈಗ 3 ಬಿಲ್ಲುಗಳು ಇವೆ. ಇವನ್ನು ಮುಗಿಸಿದ ತಕ್ಷಣ ಅಲ್ಪಕಾಲ ಚರ್ಚೆಯನ್ನು ತೆಗೆದುಕೊಳ್ಳೋಣ. ಈಗ ವಿಧೇಯಕಗಳನ್ನು ಪರ್ಯಾಲೋಚಿಸುವುದು ಮತ್ತು ಅಂಗೀಕರಿಸುವುದು.

ಶಾಸನರಚನಾ ಕಾರ್ಯಕಲಾಪಗಳು

ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕ 1991

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೆ,

1991ನೇ ಸಾಲಿನ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

+ ಶ್ರೀ. ಹೆಚ್. ವಿಶ್ವಾಂತಯ್ಯ (ಚಿತ್ರದುರ್ಗ) : ಮಾನ್ಯ ಉಪಾಧ್ಯಕ್ಷರೆಯವರೆ, ಈ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 1991ನ್ನು ಏನು ತಂದಿದ್ದಾರೆ ಇದರ ಬಗ್ಗೆ ಹೇಳುವುದಾದರೆ, ಸರ್ಕಾರ ಸದರಿ ಸಹಕಾರ ಸಂಘಗಳ ಕಾಯಿದೆ 1959 ಏನಿತ್ತು ಅದರಲ್ಲಿ 101 (ಸಿ) ಸೆಕ್ಷನ್ ಅನ್ನು ತಿದ್ದುಪಡಿ ಮಾಡಲಿಕ್ಕೆ ಇವತ್ತಿನ ದಿವಸ ಈ ಒಂದು ತಿದ್ದುಪಡಿ ವಿಧೇಯಕವನ್ನು ತಂದಿದೆ. ಇದರ ಮೂಲೋದ್ದೇಶ ಏನೆಂದರೆ ಈ ಹಿಂದೆ ಸಹಕಾರ ಸಂಘಗಳಿಗೆ ಬರಬೇಕಾದ ಬಾಕಿಯನ್ನು ವಸೂಲ್ಮಾಡಬೇಕಾದರೆ ಸುಸ್ತಿದಾರರ ಆಸ್ತಿಪಾಸ್ತಿಗಳನ್ನು ಹರಾಜು ಹಾಕುತ್ತಿದ್ದರು. ಆ ಹರಾಜಿನ ಸಂದರ್ಭದಲ್ಲಿ, ಹರಾಜುದಾರರು ಇಲ್ಲದಿದ್ದರೆ ಸರ್ಕಾರವೇ ಆ ಹರಾಜಿನಲ್ಲಿ ಭಾಗವಹಿಸಿ ತನ್ನ ಹೆಸರಿಗೆ ಸಂಬಂಧಪಟ್ಟ ಸುಸ್ತಿದಾರರ ಆಸ್ತಿಪಾಸ್ತಿಗಳನ್ನು ಕೊಂಡುಕೊಳ್ಳುವ ಅಧಿಕಾರ ಸರ್ಕಾರಕ್ಕೆ ಇತ್ತು. ಇವತ್ತಿನ ದಿವಸ ಆ ಒಂದು ಅಧಿಕಾರವನ್ನು ಬಿಟ್ಟು ಕೊಡುತ್ತಿದ್ದಾರೆ, ಮತ್ತು ಇದರಿಂದ ಒಂದು ದೊಡ್ಡ ಸಹಾಯವನ್ನು ರೈತರಿಗೆ ಮಾಡಿದ್ದೇವೆಂಬ ಭಾವನೆ ಅವರಿಗೆ ಇದ್ದಹಾಗೆ ಸಾಧ್ಯವಿಲ್ಲ. ಇವತ್ತಿನ ದಿವಸ ಆ ಒಂದು ಅಧಿಕಾರವನ್ನು ಬಿಟ್ಟಕೊಡುತ್ತಿದ್ದಾರೆ. ಮತ್ತು ಇದ್ದಹಾಗೆ ಕಾಣುತ್ತದೆ. ಇದರಿಂದ ಯಾವುದೇ ಒಂದು ಸಹಾಯ ರೈತರಿಗೆ ಆಗುವುದಕ್ಕೆ ಸಾಧ್ಯವಿಲ್ಲ. ಇವತ್ತಿನ ದಿವಸ ಸಹಕಾರ ಸಂಘಗಳಿಗೆ ಬರಬೇಕಾದ ಬಾಕಿಯನ್ನು ವಸೂಲ್ಮಾಡುವುದಕ್ಕೆ ಹರಾಜನ್ನು ಏನಾದರೂ ನಿಲ್ಲಿಸಿದ್ದೀರಾ, ಇಲ್ಲ ಹರಾಜನ್ನು ನಿಲ್ಲಿಸಿಲ್ಲ, ಸರ್ಕಾರ ತನ್ನ ಹೆಸರಿಗೆ ಹರಾಜನ್ನು ನಿಲ್ಲಿಸಿಕೊಳ್ಳುವುದಕ್ಕೆ ಇದ್ದ ಅಧಿಕಾರವನ್ನು ಬಿಟ್ಟುಕೊಟ್ಟಿದ್ದಾರೆ. ಆದರಿಂದ ರೈತರಿಗೆ ಆದಂತ ಉಪಯೋಗವಾದರೂ ಏನು? ಆ ಹರಾಜಿನಲ್ಲಿ ಬೇರೆ ಬೇರೆ ಹರಾಜುದಾರರು ಅಥವಾ ಬಿಡ್ಡುದಾರರು ಭಾಗವಹಿಸಿ ಸದರಿ ರೈತರ ಸಾಲದ ಆಸ್ತಿಯನ್ನು ಕೊಂಡುಕೊಳ್ಳುವುದಕ್ಕೆ ಅವಕಾಶ ಇದೆ. ಒಂದು ಸಾರಿ ಖಾಸಗಿಯವರು ಹರಾಜಿನಲ್ಲಿ ಭಾಗವಹಿಸಿ ರೈತರಿಂದ ಅಥವಾ ಸುಸ್ತಿದಾರರಿಂದ ಬರಬೇಕಾಗಿದ್ದ ಸಾಲಕ್ಕೆ ಬದಲಾಗಿ ಅವರ ಆಸ್ತಿಯನ್ನು ಕೊಂಡರೆ ಅದನ್ನು ಅವರು ವಾಪಸ್ಸು ಪಡೆಯುವುದಕ್ಕೆ ಸಾಧ್ಯವಿಲ್ಲ. ಈಗಿನ ಕಾನೂನು ಪ್ರಕಾರ ಅದ ಅವರಿಗೇ ಕನ್ಫರ್ಮ್ ಆಗಬೇಕಾಗುತ್ತದೆ. ಅಂದರೆ ಕೊಂಡವರಿಗೆ ಹೋಗುತ್ತದೆ. ಆದರೆ ಸರ್ಕಾರದ ಸೆಕ್ಷನ್ 101 (ಸಿ) ಪ್ರಕಾರ ರೈತರ ಭೂಮಿಯನ್ನು ಕೊಂಡುಕೊಂಡಿದ್ದರೆ ಉಪಪ್ರಕರಣ (2)ರ ಪ್ರಕಾರ ಸರ್ಕಾರ ಯಾವುತ್ತು ಬೇಕಾದರೂ ಸಂಬಂಧಪಟ್ಟ ರೈತರಿಗೆ ಆ ಭೂಮಿಯನ್ನು ವಾಪಸ್ಸು ಕೊಡುವುದಕ್ಕೆ ಅವಕಾಶ ಇತ್ತು.

ಆ ಒಂದು ಅವಕಾಶ ಇವತ್ತಿನ ದಿವಸ ಇಲ್ಲದ ಹಾಗೆ ಆಗಿದೆ. ಇದರಲ್ಲಿ ಮೂಲ ಉದ್ದೇಶ ಏನೆಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಕೇವಲ ಒಂದು ಸಣ್ಣ ತಿದ್ದುಪಡಿಯನ್ನು ತಂದು ರೈತರ ಆಸ್ತಿಯನ್ನು ಹರಾಜಿನಲ್ಲಿ ಸರ್ಕಾರ ಕೊಂಡುಕೊಳ್ಳುವುದಿಲ್ಲ ಎನ್ನುವ ಒಂದು ತಿದ್ದುಪಡಿಯನ್ನು ಪಾಸ್ ಮಾಡುವ ಮೂಲಕ ರೈತರ ಸಮಸ್ಯೆಯನ್ನು ಬಗೆಹರಿಸುತ್ತೇವೆಂದು ತಿಳಿದುಕೊಂಡರೆ ಅದು ತಪ್ಪಾಗುತ್ತದೆ. ಈ ಒಂದು ವ್ಯವಸ್ಥೆ ಏಕೆ ಬಂತು ಎಂಬುದನ್ನು ಮೂಲಭೂತವಾಗಿ ವಿಚಾರ ಮಾಡಬೇಕು. ಈ ಸಹಕಾರಿ ಸಂಘಗಳ ಸದಸ್ಯರ ಸಾಲ ಸುಸ್ತಿಯಾಗಿ ಏನು ಹರಾಜಿಗೆ ಬಂದಿದೆ ಇದರಲ್ಲಿ ಮೂಲ ಉದ್ದೇಶವನ್ನು ಸ್ವಲ್ಪಮಟ್ಟಿಗೆ ಅರ್ಥಮಾಡಿಕೊಂಡು ರಿಯಾಯಿತಿ ಕೊಡುವ ಮನಸ್ಸನ್ನು ಸರ್ಕಾರ ಮಾಡಬೇಕಾಗಿತ್ತು. ಇದು ತಪ್ಪೇ ಸರಿಯೇ ಎಂಬುದು ಅವರಿಗೆ ಬಿಟ್ಟಿದ್ದು, ಹಿಂದೆ ನಮ್ಮ ಸರ್ಕಾರ ಇದ್ದಾಗ ಇದನ್ನು ನಾವು ತಂದಿದ್ದೇವೆ. ಎಂಬುದು ನಿಜ. ಇದರ ಮೂಲ ಉದ್ದೇಶ ಏನೆಂದರೆ ಸಹಕಾರ ಸಂಘಗಳಿಗೆ ಬರಬೇಕಾದ ಬಾಕಿ ವಸೂಲಿ ಮಾಡುವುದಕ್ಕೆ

ಕೆಲವು ಸಾರಿ ಪಟ್ಟಭದ್ರ ಹಿತಾಸಕ್ತಿಗಳು ಅಡ್ಡಿಮಾಡುತ್ತಿವೆ. ಅದು ಹೇಗೆ? ಒಂದು ಊರಿನಲ್ಲಿ ನಾನು ಇದ್ದು ಪ್ರತಿಷ್ಠನೂ ಪ್ರಭಾವಶಾಲಿಯೂ ಆಗಿದ್ದರೆ ನನ್ನ ಆಸ್ತಿಯನ್ನು ಬೇರೆಯವರು ಕೊಂಡುಕೊಳ್ಳುವುದಕ್ಕೆ ಬರುವುದಕ್ಕಾಗುವುದಿಲ್ಲ. ಸಾವಿರಾರು. ಲಕ್ಷಾಂತರ ರೂಪಾಯಿ ಸಾಲ ಇದ್ದಾಗ ಟ್ರಾಕ್ಟರ್ ಸಾಲವಾಗಲೀ, 50 ಸಾವಿರ ರೂಪಾಯಿ ಸಹಕಾರಿ ಸಂಘದ ಸಾಲವನ್ನು ಬಾಕಿ ನಿಲ್ಲಿಸಿಕೊಳ್ಳಬೇಕಾದರೆ ಅವರು ಪ್ರಬಲರೇ ಆಗಿರುತ್ತಾರೆ. ಬೇರೆಯ ಜನರು ಬಂದು ಅಲ್ಲಿ ಹರಾಜಿನಲ್ಲಿ ಭಾಗವಹಿಸುವುದಕ್ಕೆ ಈ ಜನ ಅವಕಾಶವನ್ನು ಕೊಡುವುದಿಲ್ಲ. ಒಂದು ಪಕ್ಷ ಆಸ್ತಿಕೊಂಡುಕೊಂಡರೂ ಅದನ್ನು ಸ್ವಾಧೀನ ಮಾಡಿಕೊಳ್ಳುವುದಕ್ಕೆ ಬಿಡುವುದಿಲ್ಲ. ಅಂತಹ ಸಂದರ್ಭದಲ್ಲಿ ಆ ಒಂದು ಅವಕಾಶವನ್ನು ಉಪಯೋಗಿಸಿಕೊಂಡು ಸರ್ಕಾರ ತನ್ನ ಹೆಸರಿನಲ್ಲಿ ನಿಲ್ಲಿಸಿಕೊಂಡು ತದನಂತರ ವಿಲೇವಾರಿ ಮಾಡಲು ಇರತಕ್ಕ ಅಧಿಕಾರ ಇತ್ತು. ಇದರಲ್ಲಿ ಏನು ತಪ್ಪು ಇದೆಯೋ ಗೊತ್ತಿಲ್ಲ. ಪ್ರೊ. ನಂಜುಂಡಸ್ವಾಮಿ ಯವರು, ಇದರಿಂದ ರೈತರಿಗೆ ಒಂದು ದೊಡ್ಡ ಗೌರವ, ಉಪಕಾರವಾಗುತ್ತದೆಂದು ಹೇಳಿದರು. ಆದರೆ ಖಂಡಿತಾ ಇದು ಸರಿಯಲ್ಲವೆಂದು ಹೇಳುತ್ತೇನೆ. ಅದು ಏನೇ ಇರಲಿ ಇವತ್ತಿನ ದಿವಸ 101 ಸಿ ತಿದ್ದುಪಡಿ ಮಾಡುವ ಮುಖಾಂತರ ರೈತರಿಗೆ ನೇರವಾಗಿ ಯಾವುದೇ ಸಹಾಯವನ್ನು ಮಾಡುವುದಕ್ಕಾಗಿಲ್ಲ. ಅದರ ಬದಲು ತೊಂದರೆ ಆಗುತ್ತದೆ. ಇವತ್ತು ಸಣ್ಣ ಸಣ್ಣ ರೈತರ ಜಮೀನಿನ ಬಗ್ಗೆ ಯಾರು ಬೇಕಾದರೂ ಹರಾಜಿಗೆ ಬಂದು ಬಡ ಸಣ್ಣ ರೈತನ ಜಮಿನನ್ನು ಲಪಟಾಯಿಸಬಹುದು. ಇದಕ್ಕೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ಆದರೆ ಯಾರು ಪಟ್ಟಭದ್ರ ಹಿತಾಸಕ್ತಿಗಳಿದ್ದಾರೋ ಲಕ್ಷಾಂತರ ರೂಪಾಯಿ ಸಾಲ ಮಾಡಿ, ಸಹಕಾರ ಸಂಘಗಳಲ್ಲಿ ಸುಸ್ತೀದಾರರಾಗಿದ್ದಾರೋ ಅವರಿಗೆ ಸಹಾಯವಾಗುವ ರೀತಿಯಲ್ಲಿ ಇದನ್ನು ತಂದಿದ್ದೀರೇ ಹೊರತು ಈ ತಿದ್ದುಪಡಿಯಿಂದ ಸಾಮಾನ್ಯ ಜನರಿಗೆ ಯಾವುದೇ ಸಹಾಯವಾಗಿಲ್ಲವೆಂದು ಹೇಳುತ್ತೇನೆ. ಈ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸಹಕಾರಿ ಮಂತ್ರಿಗಳಿಗೆ ಒಂದು ಮಾತನ್ನು ಹೇಳುತ್ತೇನೆ. ಇವತ್ತಿನದಿವಸ ತಾವು ಸಹಕಾರಿ ಸಂಘಗಳ ಆರ್ಥಿಕ ಸ್ಥಿತಿಯನ್ನು ತಾವು ನೋಡಬೇಕು. ಎಲ್ಲಕ್ಕಿಂತಲೂ ಹೆಚ್ಚಾಗಿ ಇವತ್ತು ಸಾಲ ಕೊಡುವ ಸ್ಥಿತಿಯಲ್ಲಿ ಸಹಕಾರ ಸಂಘಗಳು ಇಲ್ಲ. ಒಂದು ಕಡೆ ಸಾಲ ವಸೂಲಿ ಆಗುವುದಿಲ್ಲ. ರೂಲ್ಸ್ ಪ್ರಕಾರ ಮಾಡುತ್ತಿಲ್ಲ. ಮತ್ತೊಂದು ಕಡೆ ಸಾಲವನ್ನು 10 ಸಾವಿರ ಕೋಟಿ ರೂಪಾಯಿಗಳ ವ್ಯವಸಾಯ ಸಾಲ ಕೊಡುವ ಅವಶ್ಯಕತೆ ಇದೆ ಎಂದು ನಾವು ಹೇಳುತ್ತಿದ್ದೇವೆ. ಒಂದು ಸಾವಿರ ಕೋಟಿ ರೂಪಾಯಿಗಳನ್ನು ನಾವು ಸಹಕಾರ ಸಂಘಗಳ ಮುಖಾಂತರ ಸಾಲವನ್ನು ಕೊಡುತ್ತೇವೆ. ಇವತ್ತು ಅವರು ಯಾರೂ ವಾಪಸ್ ಕೊಡದೇ ಇದ್ದರೆ ಬೇರೆಯವರಿಗೆ ಹೇಗೆ ಕೊಡುತ್ತಾರೆ. ಇವತ್ತು ರೈತರಿಗೆ ದುಬಾರಿ ಬಡ್ಡಿಗೆ ನೂಕುತ್ತಿದ್ದಾರೆ.

ಸಹಕಾರ ಸಂಘಗಳಲ್ಲಿ ಕಡಿಮೆ ಬಡ್ಡಿಗೆ ಸಾಲ ಸಿಗುತ್ತಾ ಇತ್ತು. ಇವತ್ತು ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಡುವ ಬದಲು ಸಾಲ ಸಿಗದೇ ಇರುವ ವ್ಯವಸ್ಥೆಯನ್ನು ಮಾಡುತ್ತಿದ್ದೀರಿ. ಇವತ್ತು ಇದರಿಂದಾಗಿ ರೈತರ ಉತ್ಪಾದನಾ ಶಕ್ತಿ, ಕೃಷಿ ಉತ್ಪಾದನೆ ಕಡಿಮೆಯಾಗಿದ್ದು ಈ ಬಗ್ಗೆ ಸರ್ಕಾರ ಯೋಚನೆ ಮಾಡಬೇಕಾಗಿದೆ. ಈ ಬಗ್ಗೆ ನಾನು ಎರಡು ಸಲಹೆಗಳನ್ನು ಕೊಡುತ್ತೇನೆ. ಮೊಟ್ಟ ಮೊದಲನೆಯದಾಗಿ ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಡುವ ವ್ಯವಸ್ಥೆ ಮಾಡಬೇಕು. ಇದಕ್ಕೆ ಯೋಜನಾರಹಿತ ಸಾಲಕೊಡಿ ಎಂದು ಹೇಳುತ್ತಿಲ್ಲ. ಸಾಲಮೇಳ, ಸಾಲ ಮನ್ನಾ ಯೋಜನೆಯಲ್ಲಿ ನಂಬಿಕೆ ಇಲ್ಲ. ಆದರೆ ಇವತ್ತು

ಮಾಡಬೇಕಾದುದು ಏನೆಂದರೆ. ರೈತರ ಉತ್ಪಾದನಾ ಶಕ್ತಿ, ಕೃಷಿಕನ ಉತ್ಪಾದನೆಯನ್ನು ಹೆಚ್ಚು ಮಾಡುವ ಬಗ್ಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಡಬೇಕು. ಇದಕ್ಕಿಂತಾ ಹೆಚ್ಚಾಗಿ ಪ್ರಾಮಾಣಿಕವಾದ ಪ್ರಯತ್ನ ರಾಷ್ಟ್ರೀಯ ನೀತಿ ಅಂಗೀಕಾರ ಆಗುವಂತೆ ನೋಡಿಕೊಳ್ಳಬೇಕು. ಅದೇನೆಂದರೆ, ರೈತರು ಬೆಳೆದ ಬೆಳೆಗೆ ನ್ಯಾಯವಾದ ಬೆಲೆ, ಮಾಡದೇ ಇದ್ದರೆ ಉಳಿದ ಪ್ರಯತ್ನ ಮಾಡುವುದಕ್ಕೆ ಹೋದರೆ ಈ ದೇಶದ ರೈತನಿಗಾಗಲೀ, ಕೃಷ್ಟಿಯ ಉತ್ಪಾದನೆಗಾಗಲೀ ಸಹಾಯಕವಾಗುವುದಿಲ್ಲವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

1.35 ಪಿ.ಎಂ

+ ಶ್ರೀ ಜಿ.ಎಸ್. ಆಚಾರ್ (ಬೈಂದೂರು) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಹಕಾರ ಸಚಿವರು ಮಂಡಿಸಿದಂಥ ಕರ್ನಾಟಕ ಸಹಕಾರ ಸಂಘಗಳ ತಿದ್ದುಪಡಿ ವಿಧೇಯಕ 1991ನ್ನು ನಾನು ಸ್ವಾಗತಿಸುತ್ತೇನೆ. ಸನ್ಮಾನ್ಯ ವಿರೋಧಪಕ್ಷದ ಗೌರವಾನ್ವಿತ ಶಾಸಕರು ಇದನ್ನು ವಿರೋಧಿಸಿಬಿಟ್ಟಿದ್ದಾರೆ. ಏತಕ್ಕೆ ಎಂದು ಗೊತ್ತಾಗಿಲ್ಲ.

ಶ್ರೀ ಎಚ್. ವಿಶ್ವನಾಥಯ್ಯ : ದೊಡ್ಡ ದೊಡ್ಡವರಿಗೆ ಸಹಾಯ ಆಗುತ್ತದೆಯೇ ಹೊರತು ಸಣ್ಣವರಿಗೆ ಆಗುವುದಿಲ್ಲ ಎಂದು. ಯಾವುದನ್ನೂ ಹರಾಜು ಮಾಡುವುದಿಲ್ಲ ಎಂದರೆ I can appreciate you. ಈಗ ಯಾರಿಗೆ ಮಾಡಿದ್ದಾರೆ? ಯಾರು ತಮ್ಮ ತಮ್ಮ ಊರುಗಳಲ್ಲಿ ಪ್ರಬಲರಾಗಿದ್ದಾರೆ ಪ್ರತಿಷ್ಠಿತರಾಗಿದ್ದಾರೆ. ಅವರು ಸರ್ಕಾರದ ಹೆಸರಿನಲ್ಲಿ ಕೊಂಡುಕೊಳ್ಳುತ್ತಾರೆಯೇ ಹೊರತು ನಾವು ಕೊಂಡುಕೊಳ್ಳುವುದಿಲ್ಲ. ಬೇರೆಯವರು ಕೊಂಡುಕೊಳ್ಳುತ್ತಾರೆಯೇ?

ಶ್ರೀ ಜಿ.ಎಸ್. ಆಚಾರ್ : ಮಾನ್ಯ ಅಧ್ಯಕ್ಷರೇ ಈ ಉದ್ದೇಶಗಳು ಸ್ಪಷ್ಟವಾಗಿದೆ. ಸಹಕಾರ ಸಾಲಗಳ ವಸೂಲಿಗೆ ಸಂಬಂಧಪಟ್ಟ ಇತರ ಉಪಬಂಧಗಳು ಸಮರ್ಪಕವಾಗಿದೆಯೆಂದು ಕಂಡುಬಂದಿರುವುದರಿಂದ ರಾಜ್ಯ ಸರ್ಕಾರ ಸ್ಥಿರ ಸ್ವತ್ತನ್ನು ಹರಾಜಿನಲ್ಲಿ ಖರೀದಿ ಮಾಡುವುದು ರೈತರಲ್ಲಿ ಅಸಗತ್ಯ ಆತಂಕ ಮತ್ತು ಅವರಿಗೆ ತೊಂದರೆ ಉಂಟು ಮಾಡುವುದರಿಂದ ಈ ಪ್ರಕರಣವನ್ನು ಲೋಪಪಡಿಸುವುದು ಎಂದು ಸರ್ಕಾರ ಮಾಡಿದೆ.ಇದರಲ್ಲಿ ಏನು ಕೆಟ್ಟಿದ್ದಿದೆ? ಹಿಂದಿನ ಸರ್ಕಾರ ಮಾಡಲಿಲ್ಲ ಅಥವಾ ತಾವು ಮಂತ್ರಿಗಳಾಗಿದ್ದಾಗ ಮಾಡಲಿಲ್ಲ ಎಂದಿರುವಂಥ ಒಂದು ಲೋಪ ಈಗ ಮಾಡಿದರು ಎಂಬ ಕಾರಣದಿಂದ ಏತಕ್ಕೆ ಇದನ್ನು ವಿರೋಧಿಸಬೇಕೋ ಎಂದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎಚ್. ವಿಶ್ವನಾಥಯ್ಯ : ಇದರಲ್ಲಿ ಯಾರಿಗೆ ಅನುಕೂಲವಾಗಿದೆ ಅದನ್ನು ಹೇಳಿ.ಒಂದು ಪಕ್ಷ ಒಂದು ಕಾನೂನಿನ ಅಡಿಯಲ್ಲಿ ಸರ್ಕಾರ ಏನಾದರೂಕೊಂಡು ಕೊಂಡಿದ್ದರೆ ಸರ್ಕಾರ ಸಂಬಂಧಪಟ್ಟವರಿಗೆ ವಾಪಸ್ ಕೊಡುವಂಥ ವಿಧಿ ಇದರಲ್ಲಿದೆ. ಇವತ್ತಿನ ದಿವಸ ನೀವೋ ನಾನೋ ಅವರ ಸ್ವತ್ತನ್ನು ಕೊಂಡುಕೊಂಡರೆ ಅದನ್ನು ವಾಪಸ್ ಕೊಡುತ್ತೇವೆಯೇ? ಇದು ಯಾರಿಗೆ ಅನುಕೂಲವಾಗಿದೆ ಎಂದರೆ ಯಾರು ಈ ದೇಶದಲ್ಲಿ ದೊಡ್ಡದೊಡ್ಡ ಭೂಮಾಲೀಕರಿದ್ದಾರೆ ಅಥವಾ ಊರಿನಲ್ಲಿ ಪ್ರಬಲರಿದ್ದಾರೆ. ಅವರಿಗೆ ಅನಕೂಲ ಮಾಡುವುದಕ್ಕೆ ಕಾನೂನು ತಂದಿದ್ದರೆ ನನ್ನದೇನೂ ತಕರಾರಿಲ್ಲ.

ಶ್ರೀ ಜಿ.ಎಸ್. ಆಚಾರ್ : ಸರ್ಕಾರದ ಹೆಸರಿನಲ್ಲಿ ಸಹ ಆಕ್ಷನ್ ಸರ್ಕಾರ ಸಹ ಬಿಟ್ ಮಾಡುವುದಕ್ಕೆ ಆಗದ ಹಾಗೆ ಕೆಲವು ವ್ಯಕ್ತಿಗಳು ಪಟ್ಟಭದ್ರ ಹಿತಾಸಕ್ತಿಗಳು ಸೇರಿ ಈ ವ್ಯವಸ್ಥೆಯನ್ನು ಹಾಳು ಮಾಡಿದಂಥ ನಿದರ್ಶನಗಳು ನಮ್ಮ ಹಳ್ಳಿಗಳಲ್ಲಿವೆ. ಇದು ತಮ್ಮ ಗಮನಕ್ಕೂ ಬಂದಿರಬಹುದು. ಆದ್ದರಿಂದ

ಸರ್ಕಾರದ ಮೇಲೆ ಮತ್ತೆ ಕೆಟ್ಟ ಹೆಸರು ಬರುತ್ತದೆ. ಸರ್ಕಾರವೇ ಆಕ್ಷನ್‌ಗೆ ನಿಲ್ಲುವುದಿಲ್ಲ, ಸಂಸ್ಥೆಗಳುಹಾಳಾಗುತ್ತವೆ. ಎಂಬ ಮಾತು ಬಂದಿದ್ದುಂಟು. ಅದಕ್ಕೆ ಬೇಕಾದಂಥ ಬೇರೆ ಬದಲಿ ವ್ಯವಸ್ಥೆ ಇರುವಾಗ ಇದೊಂದು ಏತಕ್ಕೆ ಇರಬೇಕು? ಸರ್ಕಾರದ ಮೂಲಕವೇ ಮಾಡಬೇಕು ಎಂಬ ಪ್ರೆಷರ್, ಸರ್ಕಾರದಿಂದಲೇ ಮೂಡಿಸಬೇಕು ಎಂಬ ವ್ಯವಸ್ಥೆ ಏತಕ್ಕೆ ಇರಬೇಕು ಎಂಬುದಕ್ಕಾಗಿ ಸರ್ಕಾರ ಇದನ್ನು ತಂದಿದೆ. ನನ್ನ ಆಕ್ಷೇಪಣೆ ಇರುವಂಥದ್ದು ಇದರಲ್ಲಿ ಈ ಮಸೂದೆಗಲ್ಲ, ಸಮಗ್ರವಾದ ತಿದ್ದುಪಡಿ ತರಬೇಕಾಗಿತ್ತು. ಸಹಕಾರಿ ಸಂಸ್ಥೆಗಳಿಗೆ ಸಂಬಂಧಪಟ್ಟ ಕಾನೂನಿಗೆ ಒಂದು ಸಮಗ್ರವಾದ ತಿದ್ದುಪಡಿ ಅವಶ್ಯಕತೆ ಇದೆ. 1959ರಲ್ಲಿ ಮಾಡಿದಂಥ ಕಾನೂನು ಅದು. ಅನೇಕ ತಿದ್ದುಪಡಿಗಳಾಗಿದ್ದು ಇವತ್ತು ಸುಧಾರಣೆಗೆ ಸಂಬಂಧಪಟ್ಟಂತೆ ಬದಲಾವಣೆಗಳಾಗಬೇಕು. ಇದರ ಕುರಿತು ಸಾಕಷ್ಟು ಚಿಂತನೆ ನಡೆದಿದೆ. ಹಿಂದಿನ ನಮ್ಮ ಸಹಕಾರಿ ಮಂತ್ರಿಗಳು ನಮ್ಮ ಸದನದ ಎಲ್ಲ ವರ್ಗದ ಸದಸ್ಯರ ಪ್ರಾತಿನಿಧಿಕ ಸಭೆಯನ್ನು ಕೂಡ ಕರೆದು ಸಮಾಲೋಚನೆ ಮಾಡಿಸಿದ್ದಾರೆ. ಕೆಲವು ಅನಿಷ್ಟ ಪದ್ಧತಿಗಳಿವೆ. ಇದರಿಂದ ಕಾಲಕಾಲಕ್ಕೆ ಸರಿಯಾಗಿ ಅವರೂ ಕೂಡ ಸರ್ಕಾರದಲ್ಲಿದ್ದಾಗ ಅದನ್ನು ಉಪಯೋಗಿಸಿಕೊಂಡಿದ್ದುಂಟು. ನಾಮಕರಣದ ಒಂದು ಅನಿಷ್ಟ ಪದ್ಧತಿ ಇದೆ. 30 ಬಿ ಪ್ರಕಾರ ಡೈರೆಕ್ಷನ್ ಕೊಡುವಂಥದ್ದು ಇದೆ. 30ಬಿ ಡೈರೆಕ್ಷನನ್ನು ಸಹಮಾನ್ಯ ಸಚಿವರು ಬಂದಾಗ ಅನೇಕ ಪ್ರಸಂಗಗಳಲ್ಲಿ ವಿತ್‌ಡ್ರಾ ಮಾಡಿದ್ದಾರೆ. ಆದರೆ ಅದು ಇನ್ನೊಂದು ಕಡೆಯಿಂದ ಬಂದಿದೆ. ನಮ್ಮಲ್ಲಿ ಒಂದು ಗಾದೆ ಇದೆ. " ಹೋದೆಯಾ ಪಿಶಾಚಿ ಎಂದರೆ ಬಂದೆ ಗವಾಕ್ಷಿಯಲ್ಲಿ " ಎಂದು ಅದೇರೀತಿ 30 ಬಿ ಡೈರೆಕ್ಷನ್ ಸರ್ಕಾರದಿಂದ ವಿತ್‌ಡ್ರಾ ಆಗಿದೆ. ರಿಜಿಸ್ಟ್ರಾರ್‌ರಿಂದ ಇನ್ನೊಂದು ಡೈರೆಕ್ಷನ್ ಗೈಡ್‌ಲೈನ್ ಬರುತ್ತಿದೆ. ಆ ರೂಪವಾಗಿ ಬರತಕ್ಕದ್ದು ಸರಿಯಲ್ಲ. ಯಾವುದೇ ರೀತಿಯಲ್ಲಿ ಸರ್ಕಾರದ ವಿಧಾನಗಳು ಒಂದರ ಬದಲು ಇನ್ನೊಂದು ರೂಪದಲ್ಲಿ ಬರುವುದು ಸರಿಯಲ್ಲ. ನಮ್ಮ ಲೆಕ್ಕಪರಿಶೋಧನಾ ಶುಲ್ಕವನ್ನು ಅಶಾಸ್ತ್ರೀಯವಾಗಿ ಹಾಕುತ್ತಿದ್ದಾರೆ. ಅದಕ್ಕೋಸ್ಕರ ಪರಿಶೀಲನೆಯಾಗಬೇಕು. ಉದಾಹರಣೆಗೆ ಒಂದೇ ಒಂದು ವಿಚಾರ ಹೇಳುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆ ಇದೆ. ಅದು ನಷ್ಟದಲ್ಲಿ ನಡೆಯುತ್ತಿದೆ. ಆದಷ್ಟು ಚೇತರಿಸಿಕೊಂಡು ಅದನ್ನು ಮುಂದೆ ತರುವುದಕ್ಕೆ ಈಗ ಒದ್ದಾಟ ಮಾಡುತ್ತಿದ್ದಾರೆ. ಇಂಥ ಸಕ್ಕರೆ ಕಾರ್ಖಾನೆಗೆ ಒಂದು ವಾರ ಎರಡು ವಾರಕಾಲ ಆಡಿಟ್ ಮಾಡಿದಾಗ ಅವರು, ವರ್ಕಿಂಗ್ ಕ್ಯಾಪಿಟಲ್ ನೋಡಿಕೊಂಡು ಒಂದು ಲಕ್ಷಕ್ಕೆ ಮೇಲ್ಪಟ್ಟು ಆಡಿಟ್ ಫೀ ಹಾಕಿದ್ದಾರೆ. ಅದು ಅತ್ಯಂತ ಅಶಾಸ್ತ್ರೀಯವಾದುದು.

ಉಪಾಧ್ಯಕ್ಷರು : ಶ್ರೀಯುತ ಆಚಾರ್ ಅವರೆ, ಈಗ ತಿದ್ದುಪಡಿ ಏನು ತಂದಿದ್ದಾರೆ ಅದರ ಬಗ್ಗೆ ಮಾತನಾಡಿ.

ಶ್ರೀ ಜಿ.ಎಸ್. ಆಚಾರ್ : ಅದರ ಬಗ್ಗೆಯೇ ಹೇಳುತ್ತಿದ್ದೇನೆ. ಅದರ ಜೊತೆಗೇ ಇದು ಬರಬೇಕಾಗಿತ್ತು ಎಂದು ಹೇಳುತ್ತಿದ್ದೇನೆ. ಏಕೆಂದರೆ ಸಹಕಾರಿ ರಂಗದಲ್ಲಿ ಮಾತನಾಡುವುದಕ್ಕೆ ನನಗೆ ಅವಕಾಶ ಸಿಗಲಿಲ್ಲ. ನನ್ನ ದುರಾದೃಷ್ಟವೋ ಏನೋ ಈ ಅಧಿವೇಶನದಲ್ಲಿ ಮಾತನಾಡುವುದಕ್ಕೆ ನನಗೆ ಅವಕಾಶ ಸಿಗಲಿಲ್ಲ. ಆದ್ದರಿಂದ ಅವಕಾಶ ಬಂದಾಗ ಸ್ವಲ್ಪ ವಿಷಯಾಂತರ ಮಾಡಿದರೂ ತಾವು ಕ್ಷಮಿಸುತ್ತೀರಿ ಎಂಬ ಭಾವನೆಯಿಂದ ಇದನ್ನು ಹೇಳುತ್ತಿದ್ದೇನೆ. ಈ ರೀತಿ ಅಶಾಸ್ತ್ರೀಯವಾಗಿ ಯಾವ ವ್ಯವಸ್ಥೆ ಇದೆ ಅದನ್ನು ಸರಿಮಾಡಬೇಕು. ಮತ್ತೆ

ಕಾಲಕಾಲಕ್ಕೆ ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ಬಡ್ಡಿ ರಿಯಾಯಿತಿ. ಸಾಲ ರಿಯಾಯಿತಿ ಇತ್ಯಾದಿ ಘೋರಣೆಗಳಿಂದಾಗಿ ಇವತ್ತು ಸಹಕಾರಿ ಸಂಸ್ಥೆಗಳು ಸಾಯುತ್ತಿವೆ. ಸತ್ತುಹೋಗಿವೆ. ಇದರ ಕುರಿತು ಚಿಂತನೆ ಆಗಲಿಲ್ಲ. ಕಾಲಕಾಲಕ್ಕೆ ಚುನಾವಣೆ ಸಂದರ್ಭದಲ್ಲಿ ಬೇರೆ ಬೇರೆ ಘೋಷಣೆ ಆಗಿದೆ. ಬಡ್ಡಿ ರಿಯಾಯಿತಿ ಘೋಷಣೆ ಸಾಲ ರಿಯಾಯಿತಿ ಘೋಷಣೆ ಆಗಿ ಇದರಿಂದಾಗಿ ಈ ಸಹಕಾರಿ ಸಂಸ್ಥೆಗಳು ಗ್ರಾಮಮಟ್ಟದ ಸಂಘಗಳಿಂದ ಹಿಡಿದು ಪ್ರೈಮರಿ ಸೊಸೈಟಿಗಳು, ಡಿಸಿಸಿ ಬ್ಯಾಂಕುಗಳು, ಪಿಎಲ್ಡಿ ಬ್ಯಾಂಕುಗಳು ಇವತ್ತು ಸತ್ತುಹೋಗಿವೆ.

ಇದನ್ನು ಪುನರ್ಜೀವನಗೊಳಿಸುವಂತಹ, ಪುನಶ್ಚೇತನಗೊಳಿಸುವಂತಹ ಗ್ರಾಮೀಣ ಆರ್ಥಿಕ ವ್ಯವಸ್ಥೆಯ ತನ್ನ ಕಾಲ ಮೇಲೆ ನಿಲ್ಲತಕ್ಕಂತಹ ಒಂದು ವ್ಯವಸ್ಥೆಯಾಗ ಬೇಕು. ಇದರ ಬಗ್ಗೆ ಸರಿಯಾದ ಒಂದು ಕಾರ್ಯಕ್ರಮವನ್ನು ರೂಪಿಸಬೇಕು. ವಸೂಲಿ ಬಗ್ಗೆ ಹೇಳುವುದಾದರೆ, ಮಾನ್ಯ ಸದಸ್ಯರಾದ ಕುಶಾಲರವರು ಈ ಬಗ್ಗೆ ಮಾತನಾಡುತ್ತಾರೆ. ಅವರಿಗೆ ನೀವು ಅವಕಾಶ ಕೊಡುತ್ತೀರೋ ಇಲ್ಲವೋ ಗೊತ್ತಿಲ್ಲ. ಅವರು ಮಾತನಾಡುವುದಾದರೆ ನಾನು ಹೇಳುವುದಿಲ್ಲ.

ಉಪಾಧ್ಯಕ್ಷರು : ತಾವು ಏನು ಹೇಳಬೇಕೋ ಹೇಳಿ.

ಶ್ರೀ ಬಿ.ಎಸ್. ಆಚಾರ್ : ಮಾನ್ಯ ಕುಶಾಲರವರ ಕ್ಷೇತ್ರದಲ್ಲಿ ಸಣ್ಣ ಹಿಡುವಳಿದಾರರ ಸಾಲವನ್ನು ಬಲಾತ್ಕಾರವಾಗಿ ವಸೂಲಿ ಮಾಡುತ್ತಿದ್ದಾರೆ. ಬಲಾತ್ಕಾರವಾಗಿ ವಸೂಲಿ ಮಾಡಬಾರದೆನ್ನುವ ಡೈರೆಕ್ಷನ್ ಇದ್ದರೂ ಸಹ ಅಲ್ಲಿಯ ಕೆಲವು ಸಹಕಾರ ಸಂಘಗಳವರು ರಾಜಕೀಯ ಪ್ರೇರಿತ ಉದ್ದೇಶದಿಂದ ವಸೂಲಿ ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ಆ ಸಹಕಾರ ಸಂಘದವರು ಮನೆ ಜಪ್ತಿ ಮಾಡಲಿಕ್ಕೆ ಜನಗಳನ್ನು ಕರೆದುಕೊಂಡು ಹೋಗಿ ಸಾಲವನ್ನು ವಸೂಲಿ ಮಾಡುತ್ತಿದ್ದಾರೆ. ಸಹಕಾರಸಂಘದವರೇ ಬಂದು ಈ ಕೆಲಸ ಮಾಡುತ್ತಿದ್ದಾರೆ. ಇಂತಹ ವಿಚಾರಗಳ ಬಗ್ಗೆ ಈಗ ಹೇಳದೆ ಬೇರೆ ದಾರಿಯಿಲ್ಲ, ಅಧಿವೇಶನ ಮುಗಿಯುತ್ತಿದೆ. ಸರ್ಕಾರ ಇದನ್ನು ನಿಲ್ಲಿಸಬೇಕು. ಇದರ ಬಗ್ಗೆ ಕಾನೂನನ್ನು ಸಮಗ್ರವಾಗಿ ತಿದ್ದುಪಡಿಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಉಪಾಧ್ಯಕ್ಷಣಿಯವರೆ, ಇವತ್ತು ಮಾನ್ಯ ಸಹಕಾರಿ ಮಂತ್ರಿಗಳು ತಂದಿರತಕ್ಕ ಬಿಲ್ ಏನಿದೆ ಅದರಿಂದ ನಿಜವಾಗಿಯೂ ರೈತರಿಗೆ ಅನ್ಯಾಯವಾಗಿದೆ ಎಂದು ನಾನು ಹೇಳುತ್ತಿದ್ದೇನೆ. ಏಕೆಂದರೆ ಇವತ್ತಿನ ದಿವಸ ರೈತರು ಸಾಲವನ್ನು ಯೋಗ್ಯ ವೇಳೆಯಲ್ಲಿ ಕಟ್ಟಿದಿದ್ದರೆ ಜಮೀನನ್ನು ಹರಾಜು ಮಾಡಿದಾಗ ಯಾರೂ ಜಮಿನನ್ನು ತೆಗೆದುಕೊಳ್ಳದಿದ್ದಾಗ ಸರ್ಕಾರದವರು ಅದನ್ನು ತಮ್ಮ ಕಡೆಗೆ ತೆಗೆದುಕೊಳ್ಳುತ್ತಿದ್ದರು. ಮುಂದೆ ನಿರ್ದಿಷ್ಟವಾದ ಅವಧಿಯಲ್ಲಿ ಹಣವನ್ನು ಮತ್ತೆ ವಾಪಸ್ಸು ಕೊಟ್ಟರೆ ಆ ಜಮೀನನ್ನು ಪುನಃ ಆತನಿಗೆ ವಾಪಸ್ಸು ಕೊಡುತ್ತಿದ್ದರು. ಆದರೆ ಇವತ್ತು ಸರ್ಕಾರ ಆ ಭೂಮಿಯನ್ನು ತೆಗೆದುಕೊಳ್ಳದಿದ್ದರೆ ಬೇರೆಯವರು ತೆಗೆದುಕೊಳ್ಳುವುದರಿಂದ ಆ ರೈತನಿಗೆ ತನ್ನ ಜಮೀನನ್ನು ಮರಳಿ ಪಡೆಯುವಂತಹ ಅವಕಾಶವನ್ನು ಸರ್ಕಾರದವರು ಕಸಿದುಕೊಂಡಿದ್ದಾರೆಂದು ನಾನು ತಮ್ಮ ಮುಂದೆ ಹೇಳುತ್ತಿದ್ದೇನೆ. ಆದ್ದರಿಂದ ಇವತ್ತು ನಿಜವಾಗಿಯೂ ರೈತರಿಗೆ ಬಹಳ ಅನ್ಯಾಯವಾಗಿದೆ.

ಇವತ್ತು ಯಾರು ಬಲಾಢ್ಯರು ಇರುತ್ತಾರೆ ಆ ಊರಿನಲ್ಲಿ ಯಾರು ಜೋರು ಇರುತ್ತಾರೆ. ಅವರು ನಾಲ್ಕು ಜನಕೂಡಿ ಸೊಸೈಟಿಯ ಮುಂದೆ ಹೋಗಿ ಆ ಜಮೀನನ್ನು ಪರ್ಚೇಸ್ ಮಾಡುವ ಹಕ್ಕನ್ನು ಸರ್ಕಾರದವರು ಅವರಿಗೆ ಕಲ್ಪಿಸಿಕೊಟ್ಟಿದ್ದಾರೆ.

ಇವತ್ತಿನ ದಿವಸ ಏನು ಈ ಬಿಲ್ಲನ್ನು ತಂದಿದ್ದಾರೆ ಇದರಿಂದ ನಿಜವಾಗಿಯೂ ರೈತರಿಗೆ ಅನ್ಯಾಯವಾಗಿದೆ. ಇದನ್ನು ಸರ್ಕಾರದವರು ವಾಪಸ್ಸು ತೆಗೆದುಕೊಳ್ಳಬೇಕೆಂದು ಮತ್ತು ಇನ್ನೊಮ್ಮೆ ಇದರ ಬಗ್ಗೆ ಪರ್ಯಾಲೋಚಿಸಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

+ ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಉಪಾಧ್ಯಕ್ಷಿಣಿಯವರೇ, ಇವತ್ತು ಈ ಒಂದು ಸಹಕಾರ ಕಾನೂನಿಗೆ ತಿದ್ದುಪಡಿ ತಂದಿರತಕ್ಕದ್ದು ಸರ್ಕಾರ ರೈತರನ್ನು ಆಕರ್ಷಣೆ ಮಾಡತಕ್ಕ ಒಂದು ವಿಚಾರದಿಂದ ತಂದಿದ್ದಾರೆ ವಿನಹ ರೈತರಿಗೆ ಇದರಿಂದ ಯಾವ ಪ್ರಯೋಜನವಾಗುವುದಿಲ್ಲ. ಹಿಂದಿನ ಸರ್ಕಾರ ರೈತರ ಭೂಮಿಯನ್ನು ಸಹಕಾರಸಂಘಗಳ ಸಾಲಕ್ಕೆ ಸರ್ಕಾರ ಹರಾಜಿನಲ್ಲಿ ತೆಗೆದುಕೊಳ್ಳುವ ಕಾನೂನು ಮಾಡಿದ್ದರು. ಹಿಂದಿನ ಸರ್ಕಾರ ಕೇವಲ ಕಾನೂನು ಮಾತ್ರಮಾಡಲಿಲ್ಲ. ರೈತರ ಸಾಲ ಮನ್ನಾ ಮಾಡುವಂತಹ ರಾಷ್ಟ್ರದಲ್ಲಿಯೇ ಪ್ರಥಮವಾದಂತಹ ರೈತರ ಪರವಾದ ಒಂದು ಯೋಜನೆಯನ್ನು ಹಿಂದಿನ ಸರ್ಕಾರ ಹಾಕಿಕೊಂಡು ಸಾಲ ಮನ್ನಾ ಯೋಜನೆ, ದಂಡದ ಬಡ್ಡಿ ಮನ್ನಾ ಮಾಡತಕ್ಕ ಯೋಜನೆ, ಬಡ್ಡಿಯನ್ನು ಪೂರ್ಣ ಮನ್ನಾ ಮಾಡತಕ್ಕ ಯೋಜನೆ, ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಕೊಡತಕ್ಕ ಯೋಜನೆ ಮಾಡಿದ್ದರಿಂದ, ಯಾರು ಈಪೊಂದು ಸಾಲ ಯೋಜನೆಗಳಿಂದ ಪ್ರಯೋಜನ ಪಡೆಯುತ್ತಿದ್ದಾರೆ, ಅಂತಹವವರು ಸಾಲವನ್ನು ಮಾಡುತ್ತಿದ್ದಾರೆ. ಯಾರು ಸರ್ಕಾರದವರು ಕೊಡತಕ್ಕ ಸೌಲಭ್ಯವನ್ನು ಪಡೆದು ಮರುಪಾವತಿ ಮಾಡುವುದಿಲ್ಲ ಮತ್ತು ಬಲಾಢ್ಯರು ಇರುತ್ತಾರೆ, ಆ ಉದ್ದೇಶಕ್ಕಾಗಿ ಆಗಿನ ಪರಿಸ್ಥಿತಿಯಲ್ಲಿ ಸರ್ಕಾರ ಯೋಜನೆಗಳ ದೃಷ್ಟಿಯಲ್ಲಿ ತಂದಿದ್ದರು. ಈ ಹಿಂದೆ ಇದ್ದಂತಹ ಕಡಿಮೆ ದರದ ಬಡ್ಡಿಯನ್ನಾಗಲೀ ಸಾಲ ಮನ್ನಾದ ವಿಚಾರದಲ್ಲಿ ಆಗಲಿ ಯಾವುದನ್ನೂ ಈ ಸರ್ಕಾರ ತಂದಿಲ್ಲ, ಆ ಯೋಜನೆಗಳನ್ನು ಏನಾದರೂ ಮುಂದುವರಿಸಿದ್ದರೆ ಇದನ್ನು ತೆಗೆದು ಹಾಕಿದ್ದರೆ ಸ್ವಲ್ಪ ಅರ್ಥವಿರುತ್ತಿತ್ತು. ಹಿಂದೆ ಮಾಡಿದಂತಹ ರೈತರ ಪರವಾದ ಯೋಜನೆಯನ್ನು ಈ ಸರ್ಕಾರ ತೆಗೆದುಹಾಕಿರುವುದರಿಂದ ಅವುಗಳನ್ನು ಮಾಡಲಿಕ್ಕೆ ಮನಸ್ಸು ಇಲ್ಲದಿರುವುದರಿಂದ ಇಂತಹ ಕಾನೂನನ್ನು ತರುವುದರಿಂದ ಏನೂ ಪ್ರಯೋಜನವಿಲ್ಲ.

ನನ್ನ ಅಭಿಪ್ರಾಯದಲ್ಲಿ ಇಡೀ ರಾಷ್ಟ್ರದಲ್ಲಿಯೇ ಮೊದಲಿಗೆ ಕರ್ನಾಟಕ ರಾಜ್ಯದಲ್ಲಿ ಕಡಿಮೆ ದರದಲ್ಲಿಸಾಲ ಕೊಡತಕ್ಕಂಥ ವಿಚಾರ, ರೈತರ ಬಡ್ಡಿಯನ್ನು ಮನ್ನಾ ಮಾಡತಕ್ಕಂಥ ವಿಚಾರದಲ್ಲಿ ಪ್ರಥಮವಾದ ಮೊಟ್ಟಮೊದಲನೇ ಹೆಜ್ಜೆ ಇಟ್ಟಂಥ ಒಂದು ಸಾಧನೆ ಹಿಂದಿನ ಸರ್ಕಾರಕ್ಕೆ ಸಲ್ಲತಕ್ಕದ್ದು, ಸಹಕಾರ ಸಂಘಗಳಲ್ಲಿ ರೈತಸಾಲ ಮಾಡಿದರೂ ಸಹಿತ, ಇರತಕ್ಕಂಥ ವ್ಯವಸ್ಥೆಯಲ್ಲಿ ರೈತ ತಾನು ದುಡಿದು ಸಾಲ ಮರುಪಾವತಿ ಮಾಡುವುದಕ್ಕೆ ಸರ್ಕಾರ ಯಾವುದೇ ವ್ಯವಸ್ಥೆಯನ್ನು ಮಾಡಿಲ್ಲ. ರೈತನು ಬೆಳೆದಂಥ ಮಾಲಿಗೆ ಲಾಭದಾಯಕವಾದಂಥ ಬೆಲೆ ಸಿಗತಕ್ಕಂಥ ಯೋಜನೆಯನ್ನು ಕೇಂದ್ರ ರಾಜ್ಯಸರ್ಕಾರ ಯಾವುದೂ ಹಮ್ಮಿಕ್ಕೊಂಡಿಲ್ಲ. ಎಲ್ಲಿಯವರೆಗೆ ರೈತ ಬೆಳೆಯತಕ್ಕಂಥ ಮಾಲಿಗೆ ಯೋಗ್ಯ ರೀತಿಯ, ಲಾಭದಾಕವಾದ ಬೆಲೆ ಕೊಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುವುದಿಲ್ಲ, ಅಲ್ಲಿಯವರೆಗೆ ಈ ಒಂದು ಕಾನೂನಿನಲ್ಲಿರತಕ್ಕಂಥ ರೈತನು ತಾನು ಮಾಡಿದ ಸಾಲಕ್ಕಾಗಿ ಅವನ ಜಮೀನನ್ನು ಹರಾಜು ಮಾಡತಕ್ಕಂಥ ಒಂದು ಕಾನೂನುಏನಿದೆ, ಈ ರೈತ ವಿರೋಧಿ ಕಾನೂನನ್ನು ಸಮಗ್ರವಾಗಿ ತೆಗೆದುಹಾಕಿದ್ದರೆ ಈ ಸರ್ಕಾರವನ್ನು ಮೆಚ್ಚಬಹುದಿತ್ತು.

ಸರ್ಕಾರ ಕೊಳ್ಳುವುದನ್ನು ಮಾತ್ರ ತೆಗೆದುಹಾಕುತ್ತಿದ್ದಾರೆಯೇ ವಿನಹ, ಸಾಲಕ್ಕಾಗಿ ರೈತನ ಜಮೀನನ್ನು ಹರಾಜು ಮಾಡಬಾರದು ಎನ್ನುವ ಒಂದು ಕಾನೂನನ್ನು ತಂದಿದ್ದರೆ ಅದು ರೈತರ ಪರವಾಗಿ ಆಗುತ್ತಿತ್ತು ಎನ್ನುವ ಮಾತನ್ನು ಹೇಳುತ್ತಾ, ಈ ಕಾನೂನು ಕೇವಲ ಕಣ್ಣೊರೆಸುವ ತಂತ್ರ. ಸರ್ಕಾರ ಕೊಳ್ಳುವುದು ಬಿಟ್ಟರೆ ಅಸ್ತಿ ಹರಾಜು ಹಾಕುವುದು ಕಾನೂನಿನಲ್ಲಿ ಹಾಗೆಯೇ ಉಳಿದಿದೆ. ರೈತ ಬೆಳೆದಂಥ ಮಾಲಿಗೆ ಯೋಗ್ಯ ಬೆಲೆ ಕೊಡತಕ್ಕಂಥ ವಿಚಾರ ಈ ಸರ್ಕಾರಕ್ಕೆ ಇಲ್ಲ. ಆದ್ದರಿಂದ ಈ ತಿದ್ದುಪಡಿಯಿಂದ ರೈತನಿಗೆ ಯಾವ ಪ್ರಯೋಜನವೂ ಆಗುವುದಿಲ್ಲ. ಇದನ್ನು ವಾಪಾಸ್ಸು ತೆಗೆದುಕೊಂಡು ರೈತ ಮಾಡಿದಂಥ ಸಾಲಕ್ಕೆ ಅವನ ಜಮೀನನ್ನು ಹರಾಜು ಮಾಡಬಾರದು ಎನ್ನುವ ಕಾನೂನನ್ನು ತರಬೇಕು. ಮತ್ತು ಈಗ ಇರುವ ಕಾನೂನನ್ನು ತೆಗೆದುಹಾಕಬೇಕು ಎಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತಿದ್ದೇನೆ.

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಮಂತ್ರಿ) : ಮಾನ್ಯ ಉಪಾಧ್ಯಕ್ಷರೇ, ಈ ವಿಧೇಯಕದ ಮೂಲಕ ಕರ್ನಾಟಕ ಸಹಕಾರ ಸಂಘಕಾಯದೆ 1959ರ 101(ಸಿ) ಯನ್ನು ಏಕೆ ಕೈಬಿಡುವುದಕ್ಕೆ ನಾವು ಯೋಚನೆ ಮಾಡಿದ್ದು ಎಂದರೆ. ಇದರಿಂದ ಯಾವ ಪ್ರಯೋಜನವೂ ಆಗಿಲ್ಲ, ಏಕೆಂದರೆ ಉದಾಹರಣೆಗೆ ಹೇಳಬೇಕೆಂದರೆ,1988ರಿಂದ 31-3-1989 ರವರೆಗೆ ಸರ್ಕಾರ 143 ಕೇಸ್‌ಗಳಲ್ಲಿ ಮಾತ್ರ ಅಕ್ಷಗಳಲ್ಲಿ ಭಾಗವಹಿಸಿ ಸುಮಾರು 31.30 ಲಕ್ಷ ಇದರಲ್ಲಿ ಮಾತ್ರ ಸರ್ಕಾರ ಹರಾಜು ಮಾಡಿದೆ. ಆದರೆ ಇದರಿಂದ ರೈತರಿಗೆ ಕಿರುಕುಳ ಬಹಳ ಆಗತ್ತಿತ್ತು. ಮತ್ತೆ ಹಲವಾರು ಸದಸ್ಯರು ಹಾಗೂ ರೈತರು 101(ಸಿ) ಯನ್ನು ಕೈಬಿಡಬೇಕೆಂದು ಸರ್ಕಾರಕ್ಕೆ ಪದೆಪದೇ ಮನವಿಮಾಡಿದ್ದರಿಂದ ಮತ್ತು ಇದರ ಪರಿಣಾಮ ನೋಡಿಕೊಂಡು ಇವತ್ತು ಸರ್ಕಾರ ಕೈಬಿಡಬೇಕು ಎಂದುಹೇಳಿ ಈ ತಿದ್ದುಪಡಿಯನ್ನು ತಂದಿದ್ದೇವೆ. ಆದರೆ ಇವತ್ತಿನ ದಿವಸ ಹಿರಿಯರಾದ ಶ್ರೀ ಏಕಾಂತಯ್ಯನವರು ಈ ಬಗ್ಗೆ ಸಲಹೆ ಕೂಡ ಮಾಡಿದ್ದಾರೆ. ಇದನ್ನು ನಾವು ಕೈಬಿಟ್ಟರೆ ಮತ್ತೆ ಸರ್ಕಾರ ಸಹಕಾರ ಸಂಘಗಳಿಗೆ ವಸೂಲು ಮಾಡುವುದಕ್ಕೆ ತೊಂದರೆ ಮಾಡಿದಂತೆ ಆಗುತ್ತದೆ. ಮತ್ತು ಇನ್ನೂ ಸುಸ್ತಿ ಜಾಸ್ತಿಆಗುತ್ತದೆ ಎಂದು ಹೇಳಿದ್ದಾರೆ. ಇದರ ಜೊತೆಗೆ ಇನ್ನೊಂದು ಸಲಹೆಯನ್ನು ಕೊಟ್ಟಿದ್ದಾರೆ. ರೈತರಿಗೆ ಈ ರೀತಿ ಸಹಾಯಮಾಡುವ ಬದಲು ರೈತ ಬೆಳೆಯ ತಕ್ಕಂಥವಸ್ತುಗಳಿಗೆ ಒಳ್ಳೆಯ ಧಾರಣೆ ಕೊಟ್ಟರೆ ಬಹಳ ಉಪಯೋಗವಾಗುತ್ತದೆ ಎಂದು ಹೇಳಿದ್ದಾರೆ. ಇದು ಸರ್ಕಾರದ ಯೋಚನೆಯಲ್ಲಿದೆ. ಆದಷ್ಟು ಬೇಗ ಸರ್ಕಾರ ರೈತರಿಗೆ ಅನುಕೂಲವಾಗುವಂಥ ಕಾನೂನನ್ನು ತರುತ್ತದೆ. ಇದರ ಜೊತೆಗೆ ಶ್ರೀ ಆಚಾರ್ ಅವರು ಕೂಡ ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಈ ಗೋಬರ್ ಪ್ಲಾಂಟ್‌ನ್ನು ಸಮಗ್ರವಾಗಿ ಬದಲಾವಣೆ ಮಾಡಬೇಕೆಂದು ಕೂಡ ಹೇಳಿದ್ದಾರೆ. ಇದರ ಬಗ್ಗೆ ಒಂದು ಕಾಂಪ್ರಹೆನ್ಸೀವ್ ಅಮೆಂಡ್ ಮೆಂಟ್ ಬಿಲ್ ಕೂಡ ರೆಡಿಯಾಗಿದೆ. ವೇಳೆಯ ಅಭಾವದಿಂದ ಈ ಸಾರಿ ಮಾಡಲಿಕ್ಕೆ ಆಗಲಿಲ್ಲ, ಬರುವ ಅಧಿವೇಶನದಲ್ಲಿ ಇದನ್ನು ಮಂಡಿಸುತ್ತೇವೆ ಎಂದು ಹೇಳುತ್ತೇನೆ. ಆದ್ದರಿಂದ ಇವತ್ತಿನ ದಿವಸ ಈ 1991ನೇ ಸಾಲಿನ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ನಾನು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ 1991 ನೇ ಸಾಲಿನ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ಮತ್ತು 3

ಉಪಾಧ್ಯಕ್ಷರು : ಖಂಡ 2 ಮತ್ತು 3, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಲಸ್ಪಟ್ಟಿತು.

(ಖಂಡ 2 ಮತ್ತು 3 ಎರಡೂ ಸೇರಿದಂತೆ ಈ ವಿಧೇಯಕ್ಕೆ ಸೇರಿಸಲ್ಪಟ್ಟಿತು.)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲೇ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ, ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್. ಆರ್. ಮೋರೆ (ಸಹಕಾರ ರಾಜ್ಯಸಚಿವರು) : 1991 ನೇ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿಸುವಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, 1991ನೇ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

1991ನೇ ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೈದ್ಯ ವೃತ್ತಿ ನಿರತರ ನೋಂದಣಿ ಮತ್ತು ವೈದ್ಯಕೀಯ ವೃತ್ತಿನಿರತರ ಸಂಕೀರ್ಣ ಉಪಬಂಧಗಳ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ವೀರಪ್ಪ ಮೊಯ್ಲಿ (ಶಿಕ್ಷಣ ಸಚಿವರು) : ಮಾನ್ಯ ಉಪಾಧ್ಯಕ್ಷರೇ, 1991ನೇ ಕರ್ನಾಟಕ ಆಯುರ್ವೇದ ಯುನಾನಿ ವೈದ್ಯವೃತ್ತಿ ನಿರತರ ನೋಂದಣಿ ಮತ್ತು ವೈದ್ಯಕೀಯ ವೃತ್ತಿನಿರತರ ಸಂಕೀರ್ಣ ಉಪಬಂಧಗಳ (ತಿದ್ದುಪಡಿ) ವಿಧೇಯಕವನ್ನು ಮಾನ್ಯ ಆರೋಗ್ಯ ಸಚಿವರ ಪರವಾಗಿ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ : ಇದರಲ್ಲಿ ಬರೀ ನೊಂದಾಣಿಕೆಯ ಫಿಯನ್ನು ಸ್ವಲ್ಪ ಜಾಸ್ತಿ ಮಾಡುವುದು. ಮುನ್ನೂರು ರೂಪಾಯಿ ಹೊಸಬರಿಗೆ, ಇನ್ನೂರು ರೂಪಾಯಿ ಈಗ ಇರತಕ್ಕವರಿಗೆ.